
# ಒಳಜಗತ್ತನ್ನು ಬೆಳಗುವ ಬಿಂಬಗಳು

ಮನುಷ್ಯ ಬದುಕು ಸಾಗಿಸಲು ಹಲವು ರೀತಿಯ ಬೆಳಕಿನಕೋಲುಗಳ ಆಸರೆ ಪಡೆದಿರುತ್ತಾನೆ. ಯೌವನದಲ್ಲಿ ಅದರ ಕಾವು ಹುಮ್ಮಸ್ಸು ಕೊಟ್ಟರೆ, ಮುಂದಿನ ದಿನಗಳಲ್ಲಿ ಖ್ಯಾತಿ, ಹಣ, ಅಂತಸ್ತು, ಅಧಿಕಾರ ಹಲವರ ಸಹಾಯಕ್ಕೆ ಬರಬಹುದು. ಬರಬಹುದು ಅಷ್ಟೆ; ಅವು ಬಂದೇ ಬರುತ್ತವೆ ಎಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲ. ಕೆಲವರು ಕೃಷಿಯಲ್ಲಿ, ಸಮಾಜಸೇವೆಯಲ್ಲಿ, ಆಸ್ತಿಪಾಸ್ತಿ ಮಾಡುವಲ್ಲಿ ನೆಮ್ಮದಿ ಕಾಣಬಹುದು. ಕೆಲವರು ಈ ಎಲ್ಲದರಿಂದ ವಿಮುಖರಾಗಿ ತತ್ವಚಿಂತನೆಯಲ್ಲಿ ತೊಡಗಿಕೊಳ್ಳುತ್ತಾರೆ. ಅವರಷ್ಟೇ ಅಸಹಾಯಕರಾಗಿರುವ ಸ್ವಾಮಿಗಳ, ಗುರುಗಳ ಮೊರೆಹೋಗುತ್ತಾರೆ. ಈ ಪ್ರಪಂಚದಲ್ಲಿ ಯಾರಿಂದಲೂ ನೋವುಗಳಿಂದ ಬಿಡುಗಡೆ, ಕವಿದಿರುವ ಬಂಧನಗಳಿಂದ ಮುಕ್ತಿ ಸಿಗುವುದಿಲ್ಲ ಎಂದು ಅವರು ತಿಳಿದುಕೊಳ್ಳುವಷ್ಟರಲ್ಲಿ ಕಾಲ ಮಿಂಚಿರುತ್ತದೆ.

ಜೀವನವ್ಯಾಮೋಹಿಗಳು ಬದುಕನ್ನು ತೀವ್ರವಾಗಿ ಬದುಕಲು ಕಂಡುಕೊಳ್ಳುವ ಮಾರ್ಗಗಳು ಹಲಬಗೆಯವು. ಅವರು ಈ ಲೋಕದ ಎಲ್ಲ ಸುಖಭೋಗಗಳನ್ನು ಒಂದು ಕೈ ನೋಡಿಯೇ ಬಿಡುವ ಎಂದು ಅವುಗಳ ಬೆನ್ನು ಹತ್ತಿರುತ್ತಾರೆ. ಅವು ಅವರನ್ನು ಸರಿಯಾದ ದಿಕ್ಕಿಗೆ ಕರೆದೊಯ್ಯಲಾರವು ಎಂದು ಸಂಸಾರಸ್ಥ ಸುಭಗರು ಗೊಣಗಬಹುದು. ಇಲ್ಲಿ ಬದುಕನ್ನು ಸಾಗಿಸಲು ಇದೇ ಕೊನೆಯ ದಾರಿ ಎಂಬುದನ್ನು ಯಾರಿಗೂ ತೋರಲು ಸಾಧ್ಯವಾಗಿಲ್ಲ. ಅವರ ಅನುಭವ, ಚಿಂತನೆ ಕಂಡುಕೊಂಡದ್ದು ಮಾತ್ರ ಅವರ ಮಟ್ಟಿಗೆ ಸತ್ಯವಾಗಿರಲು ಸಾಧ್ಯ. ಕೆಲವರ ಬದುಕನ್ನು ಓಶೋ ರಜನೀಶ್, ಜಿಡ್ಡು ಕೃಷ್ಣಮೂರ್ತಿ, ರಮಣರ ಚಿಂತನೆಗಳು ಉಲ್ಲಸಿತಗೊಳಿಸಬಹುದು. ಕು.ವೆಂ.ಪು., ಲಂಕೇಶ್, ತೇಜಸ್ವಿ ಬರಹಗಳು, ಬಿಸ್ಮಿಲ್ಲಾಖಾನ್, ಚೌರಾಸಿಯಾ ಸಂಗೀತ ಮುದಗೊಳಿಸಬಹುದು. ಇನ್ನು ಕೆಲವರಿಗೆ ಸಿನಿಮಾ, ಕ್ರೀಡೆ, ನಾಟಕ, ಪ್ರವಾಸ, ಜೂಜಿನಂತಹ ಹವ್ಯಾಸಗಳು ಬದುಕನ್ನು ಮುಂದಕ್ಕೆ ಕರೆದೊಯ್ಯಲು ನೆರವಾಗಬಹುದು. ಇಲ್ಲಿ ಎಲ್ಲರೂ ಒಂದೊಂದು ಬಣ್ಣ ಪಡೆದಿರುತ್ತಾರೆ; ನೂರು ಗದ್ದಲಗಳ ನಡುವೆ ನಮ್ಮ ಸದ್ದೂ ಕೇಳುತ್ತಿರುತ್ತದೆ. ಇದಕ್ಕೆ ಕೊನೆ ಮೊದಲಿಲ್ಲ.

ಬಿಸಿಲಿನಲ್ಲಿ ಹಣ್ಣು ಮಾರುವ ಅಜ್ಜ, ಮೀನು ಮಾರುವ ಮೀನುಗಾರ್ತಿ, ಜನಸಂದಣಿಯಲ್ಲೂ ಗಾಜಿನ ಬಳೆಮಾರುವ ಬಳೆಗಾರ ಇವರೆಲ್ಲರೂ ತಮ್ಮದೇ ರೀತಿಯಲ್ಲಿ ಬದುಕಿನ ಸಂಭ್ರಮದಲ್ಲಿ ಮುಳುಗಿರುವವರು. ಇವರೂ ಸಹ ನಮಗೆ ಸ್ಫೂರ್ತಿಯ ಊಟೆಗಳಾಗಬಹುದು. ಕಾಣುವ ಕಣ್ಣು ನಿಚ್ಚಳವಾಗಿದ್ದರೆ ಹೊರಜಗತ್ತಿನ ಬಿಂಬಗಳಿಂದ ನಮ್ಮ ಒಳಗನ್ನು ಬೆಳಗಿಸಿಕೊಳ್ಳಬಹುದು. ದೊಡ್ಡ ಸಾಹಿತ್ಯಕೃತಿಗಳು ಹುಟ್ಟುವುದು ದೊಡ್ಡಚಿಂತನೆಗಳ ಪ್ರಭಾವದಿಂದ ಅಲ್ಲ; ಅವು ಬದುಕಿನಿಂದ ಹುಟ್ಟಿದ ಸಣ್ಣಕಿಡಿಯ ಪರಿಣಾಮವಾಗಿರುತ್ತವೆ. ನಾವು ನಿತ್ಯದ ಬದುಕಿನಲ್ಲಿ ಕಂಡ ನೋಟ, ಅಂತಃಕರಣ ಮುಟ್ಟಿದ ಮಾತು, ಕಲಕಿದ ಘಟನೆ ಕತೆಯೊಂದರ ವಸ್ತುವಾಗಬಹುದು. ನಮ್ಮ ಸುತ್ತಲೂ ನೋಡಿದರೆ ಬದುಕಿನ ಬಗ್ಗೆ ನಂಬಿಕೆ, ವಿಶ್ವಾಸ ಹುಟ್ಟಿಸಬಲ್ಲ ಅನೇಕ ವ್ಯಕ್ತಿಗಳು, ಸಂಗತಿಗಳು ಕಾಣಸಿಗುತ್ತವೆ. ಅವೇ ನಮ್ಮನ್ನು ಮುನ್ನಡೆಸಬಲ್ಲ ಊರುಗೋಲುಗಳಾಗಿ ಅನುದಿನವೂ ಪೊರೆಯಬಲ್ಲವು, ಚೈತನ್ಯ ಉಕ್ಕಿಸಬಲ್ಲವು.

**ಸಂದೀಪ ನಾಯಕ**



ವೆಂಕಟ್ರಮಣ ಭಟ್